ಸಿ) ಈ ಎರಡು ಮಟ್ಟಗಳಲ್ಲಿನ ಹುದ್ದೆಗಳ ಕೆಲಸದ ಒತ್ತಡ ಹಾಗೂ ವಿದ್ಯಾರ್ಹತೆ ಒಂದೇ ಆಗಿದೆಯೇ?

ಡಿ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಇ) ವಿಚಾರದಲ್ಲಿ ಈ ತಾರತಮ್ಯವನ್ನು ಸರಿಪಡಿಸಲು ಸರ್ಕಾರ ತಕ್ಷಣ ಕಾರ್ಯಕ್ರಮ ಕೈಗೊಳ್ಳುವುದೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :–

ಎ) ಹೌದು.

ಬಿ) ಸರ್ಕಾರಿ ಆದೇಶ ಸಂಖ್ಯೆ ಇಡಿ 415 ಡಿಸಿಇ 87 ದಿನಾಂಕ 17–12–88 ನ್ನು ಸ್ವತಂತ್ರ ಪದವಿ-ಪೂರ್ವ ಕಾಲೇಜುಗಳಿಗೆ ವಿಸ್ತರಿಸಿರುವುದಿಲ್ಲ.

ಸಿ) ಹೌದು.

ಡಿ) (ಬಿ) ನಲ್ಲಿ ಕೊಟ್ಟಿರುವ ಉತ್ತರ ಇದಕ್ಕೂ ಅನ್ವಯಿಸುತ್ತದೆ.

ಇ) ಸಧ್ಯಕ್ಕೆ ಸರ್ಕಾರದ ಪರಿಶೀಲನೆಯಲ್ಲಿಲ್ಲ.

ವಿಷಯ :– ಖಾಲಿಯಿರುವ ಮರಾಠಿ ಶಿಕ್ಷಕರ ಹುದ್ದೆಗಳು.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 623 (911)

ಶ್ರೀ ಬಿ. ಐ. ಪಾಟೀಲ್ (ಉಚ್ಚಗಾಂ) :– ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಎ) ಬೆಳಗಾಂ ಮತ್ತು ಖಾನಾಪುರ ತಾಲ್ಲೂಕುಗಳ ಪ್ರಾಥಮಿಕ ಶಾಲೆಗಳಲ್ಲಿ ಖಾಲಿಯಿರುವ ಮರಾಠಿ ಶಿಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು ?

ಬಿ) ಈ ಹುದ್ದೆಗಳನ್ನು ಶೀಘ್ರವಾಗಿ ಭರ್ತಿ ಮಾಡಲು ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮಂತ್ರಿಗಳು) :–

ಎ) ಖಾಲಿಯಿರುವ ಹುದ್ದೆಗಳ ಸಂಖ್ಯೆ : ಬೆಳಗಾಂ ತಾಲ್ಲೂಕು — 24, ಖಾನಾಪುರ ತಾಲ್ಲೂಕು — 22.

ಬಿ) ಪ್ರಾಥಮಿಕ ಶಾಲಾ ಶಿಕ್ಷಕರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ವಿಶೇಷ ನೇಮಕಾತಿ ನಿಯಮಗಳನ್ನು ರೂಪಿಸುವ ಕ್ರಮಕೈಗೊಳ್ಳಲಾಗಿದ್ದು, ಆದಷ್ಟು ಶೀಘ್ರವಾಗಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

ವಿಷಯ :– ಹುಕ್ಕೇರಿ ತಾಲ್ಲೂಕ್ ಯಾದಗೂಡದಲ್ಲಿರುವ ಸರದೇಸಾಯಿ ಸಂಯುಕ್ತ ಪದವಿ ಪೂರ್ವ ಕಾಲೇಜಿಗೆ ಅನುದಾನ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 625 (1108)

ಶ್ರೀ ಸುಭಾಷ್ ಜೋಶಿ (ನಿಪ್ಪಾಣಿ) :– ಮಾನ್ಯ ಶಿಕ್ಷಣ ಮತ್ತು ಸಂಸದೀಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಎ) ಸರದೇಸಾಯಿ ಸಂಯುಕ್ತ ಪದವಿ ಪೂರ್ವ ಕಾಲೇಜು ಯಾದಗೂಡ, ತಾಲ್ಲೂಕು ಹುಕ್ಕೇರಿ ವೇತನ ಅನುದಾನ ನೀಡಿಲ್ಲವೆಂಬುದು ನಿಜವೇ ?

ಬಿ) ಇಲ್ಲದಿದ್ದಲ್ಲಿ ಯಾವಾಗ ಮಾಡಲಾಗುವುದು ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ಸಚಿವರು) :–

ಎ) ಹೌದು.

ಬಿ) ಸರ್ಕಾರವು ಸಹಮತಿಯನ್ನು ನೀಡಿದೆ. ಆಡಳಿತ ಮಂಡಲಿಯವರಿಂದ ಮುಚ್ಚಳಿಕೆ ಕರಾರು ಒಪ್ಪಂದವನ್ನು ಪಡೆದುಕೊಂಡು ಸರ್ಕಾರವು ಈ ದಿಸೆಯಲ್ಲಿ ಆದೇಶವನ್ನು ಹೊರಡಿಸಲಾಗುವುದು.